**ದಿನಾಂಕಃ 17-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಸಿ ಬಿ ಕೆ ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ.ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -1 ಎಂದು, ಪಿರ್ಯಾದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -2 ಎಂದು, ಸ್ಥಳ ಪಂಚನಾಮೆ ಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -3 ಎಂದು, ವಾಹನದ ಜಪ್ತಿ ಪಂಚನಾಮೆ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -5 ಎಂದು, ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ -6 ಎಂದು, ದೋಷಾರೋಪಣೆ ಪಟ್ಟಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -7 ಎಂದು, ಎಮ್ ಎಲ್ ಸಿ ಯನ್ನು ನಿ ಪಿ -8 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ ಪಿ -9 ಎಂದು, ಒಂದು ಮೆಡಿಕಲ್ ಬಿಲ್ಲನ್ನು ನಿಪಿ -10 ಎಂದು, ಒಂದು ಒಪಿಡಿ ಯನ್ನು ನಿ ಪಿ -11 ಎಂದು, ಅಂಗನ್ಯೂನತ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 12 ಎಂದು, 3 ಎಕ್ಸರೆಗಳನ್ನು ಒಟ್ಟಾಗಿ ನಿ ಪಿ -13 ಎಂದು ಗುರುತಿಸಲಾಯಿತು.

ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ- 14 ರಿಂದ ನಿ ಪಿ- 16 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ ಕೆ ಎಸ್ ವಕೀಲರಿಂದಃ**

ಅಪಘಾತವು ಶಿಕಾರಿಪುರದ ಹೆಲಿಪ್ಯಾಡ್ ಹತ್ತಿರ ದಿನಾಂಕ 12.05.2024 ರಂದು ಆಗಿರುತ್ತದೆ. ಅಪಘಾತವಾದ ತಕ್ಷಣ ನನ್ನ ಮಗ ಶಿಕಾರಿಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆನಂತರ ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತೇನೆ. ಮೆಗ್ಗಾನ ಆಸ್ಪತ್ರೆಯಲ್ಲಿ 8-10 ದಿವಸಗಳ ಕಾಲ ದಾಖಲಾಗಿದ್ದೇನು. ನಾನು ಹೊರರೋಗಿಯಾಗಿ ಎಸ್ ಎಸ್ ಆಸ್ಪತ್ರೆ ದಾವಣಗೆರೆಗೆ

ಚಿಕಿತ್ಸೆಗೆ ಹೋಗಿರುತ್ತೇನೆ. ಅಪಘಾತದಿಂದ ನನ್ನ ಮಗನಿಗೆ ಕಾಲು ಸೊಟ್ಟಾಗಿತ್ತು ಮತ್ತು ಎಡಗೈ ಮತ್ತು ಎಡಗಾಲಿಗೆ ಗಾಯವಾಗಿತ್ತು. ಅಲ್ಲಿ ಪಿ ಒ ಪಿ ಬ್ಯಾಂಡೇಜ್ ಹಾಕಿದ್ದರು. ಸರ್ಕಾರಿ ಆಸ್ಪತ್ರೆ ಮತ್ತು ಮೆಗ್ಗಾನ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ನನ್ನ ಮಗ ಅಪಘಾತವಾದಾಗ 9 ನೇ ತರಗತಿಯವರೆಗೆ ಒದುತ್ತಿದ್ದನು. ಈಗ ಶಾಲೆ ಹೋಗುತ್ತಿಲ್ಲ. ನನ್ನ ಮಗ ಖಾಸಗಿ ಆಸ್ಪತ್ರೆಯಲ್ಲಿ ತೋರಿಸಿಕೊಂಡಿದ್ದು ಅದಕ್ಕೆ ಖರ್ಚು ಮಾಡಿರುತ್ತೇನೆ. ನನ್ನ ಮಗ ಒದುತ್ತಿದ್ದ ರಜೆ ಇದ್ದಾಗ ಕೂಲಿ ಕೆಲಸ ಮಾಡುತ್ತಿದ್ದನು. ಅಪಘಾತವಾಗಿ ಎಷ್ಟು ದಿನದ ನಂತರ ಸಂಪೂರ್ಣ ಗುಣಮುಖನಾಗಿದ್ದ ಎಂದರೆ ಇನ್ನು ನೋವು ಬರುತ್ತದೆ ಎಂದು ಹೇಳುತ್ತಿದ್ದಾನೆ. ನನ್ನ ಮಗನಿಗೆ ಅಪಘಾತದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ನನ್ನ ಮಗನಿಗೆ ಚಿಕಿತ್ಸೆ ನೀಡಿದ ಮೆಗ್ಗಾನ ಆಸ್ಪತ್ರೆಯ ವೈದ್ಯರಿಂದ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ಮಗನಿಗೆ ಅಂಗನ್ಯೂನತೆ ಪ್ರಮಾಣಪತ್ರ ನೀಡಿದ ವೈದ್ಯರು ಚಿಕಿತ್ಸೇ ನೀಡಿದ ವೈದ್ಯರು ಅಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಪ್ರಮಾಣದ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ತೆಗೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಅಪಘಾತವಾದಾಗ 15 ವರ್ಷ ಆಗಿರುತ್ತದೆ. ನನಗೆ ಶಾಲಾ ದಾಖಲಾತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಮಗ ವಿದ್ಯಾರ್ಥಿಯಾಗಿದ್ದನು. ಎನು ದುಡಿಯುತ್ತಿರಲಿಲ್ಲ. ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.